**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 23.04.2026:</u>**

<u>ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ</u>

ನಾನು ದ್ವಿತೀಯ ಪಿಯುಸಿ ಓದಿರುತ್ತೇನೆ. ನಾನು ಕೆನರಾ ಬ್ಯಾಂಕಿನಿಂದ 20ಲಕ್ಷ ಸಾಲ ಪಡೆದಿರುತ್ತೇನೆ. 5ಲಕ್ಷ ರೂ. ಸಾಲ ಕೂಡ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಅದು ಓಡಿ ಸಾಲ ಎನ್ನುತ್ತಾರೆ, 2022ರಲ್ಲಿ ಪಡೆದಿರುತ್ತೇನೆ. ಗಾರ್ಮೆಂಟ್ಸ್ ನಡೆಸಲು ಯಂತ್ರೋಪಕರಣಗಳನ್ನು ತೆಗೆದುಕೊಳ್ಳಲು ಸಾಲ ಪಡೆದಿರುತ್ತೇನೆ. ಈಗಲೂ ಗಾರ್ಮೆಂಟ್ಸ್ ನಡೆಯುತ್ತಿದೆ ಎಂದರೆ ಸರಿಯಲ್ಲ. ಸಾಲ ಪಡೆದುಕೊಳ್ಳುವಾಗ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಿಪಿ.1, 3ರಲ್ಲಿರುವ ಸಹಿ ನನ್ನದೆ. ಕರಾರಿನಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದು ಇಂಗ್ಲೀಷ್ ನಲ್ಲಿ ಇತ್ತು, ಸಹಿ ಹಾಕಲು ಹೇಳಿದರು ಹಾಕಿದ್ದೇನೆ ಎನ್ನುತ್ತಾರೆ. ನಾನು ಸಾಲದ ಹಣವನ್ನು ಪ್ರತಿ ತಿಂಗಳು ಕಟ್ಟದೇ ಇದ್ದಲ್ಲಿ ದಂಡದ ಬಡ್ಡಿ ಎಷ್ಟು ಕಟ್ಟಬೇಕಾಗಿತ್ತು ಎಂದರೆ ಸಾಕ್ಷಿಯು ನನಗೆ 0% ಎಂದು ಹೇಳಿದ್ದರು ಎನ್ನುತ್ತಾರೆ. ಯಂತ್ರೋಪಕರಣ ಮಾರಾಟ ಮಾಡಿದವರಿಗೆ ನನ್ನ ಖಾತೆ ಮೂಲಕವೇ 23ಲಕ್ಷ ಜಮೆ ಆಗಿದೆ ಎಂದರೆ, ಸಾಕ್ಷಿ 20 ಲಕ್ಷ ಎನ್ನುತ್ತಾರೆ. ದಾವೆಯಲ್ಲಿ ಕೇಳಿದಂತೆ ಹಣವನ್ನು ನಾನು ವಾದಿಗೆ ಕೊಡಬೇಕು ಎಂದರೆ ಸಾಕ್ಷಿಯು ವ್ಯಾಪಾರ ನಷ್ಟವಾಗಿದ್ದರಿಂದ ಕಟ್ಟಲಾಗಿರಲಿಲ್ಲ ಎನ್ನುತ್ತಾರೆ.

(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**